ಪಿ.ಆರ್.ಒ.ಗಳನ್ನು ನೇಮಿಸಿಕೊಳ್ಳಬೇಕು ಅನ್ನುವ ಸಂಪ್ರದಾಯವನ್ನು ಶುರು ಮಾಡಿದ್ದೇ ನಾನು.

**◆ 'ಸುದ್ದಿ ಸಂಗಾತಿ' ಸೇರಿದಂತೆ ಬೇರೆ ಕೆಲವು ಪತ್ರಿಕೆಗಳಿಗೂ ನೀವು ಕೆಲಸ ಮಾಡಿದ್ದೀರಿ ಅಲ್ಲವೇ?**

'ಅರಗಿಣಿ', 'ನಕ್ಷತ್ರಲೋಕ' ಮೊದಲಾದ ಪತ್ರಿಕೆಗಳಿಗೆ ಕೆಲಸ ಮಾಡಿದ್ದೀನಿ. 'ಅರಗಿಣಿ'ಗೆ ನಾನು ಗೌರವ ಸಂಪಾದಕಿಯಾಗಿದ್ದೆ. 'ಸುದ್ದಿ ಸಂಗಾತಿ'ಯಲ್ಲಿ ಕಾಲಂ ಬರೀತಾ ಇದ್ದೆ. 'ಬೆಳ್ಳಿ ಚುಕ್ಕಿ' ಎನ್ನುವ ವಿಡಿಯೊ ನಿಯತಕಾಲಿಕವನ್ನೂ ಸಂಪಾದಿಸಿದ್ದಿದೆ, ವಿ.ಎನ್. ಸುಬ್ಬರಾಯರ ಜೊತೆಗೂಡಿ.

**◆ ಕಲೆ ಮತ್ತು ಸಾಂಸ್ಕೃತಿಕ ಲೋಕಗಳಲ್ಲಿ ನೀವು ಮಾಡಿದ ಕೆಲಸಗಳನ್ನು ಕುರಿತು ಸ್ವಲ್ಪ ಮಾತನಾಡಬಹುದು. 'ಸುಚಿತ್ರಾ' ಹಾಗೂ 'ಉದಯಭಾನು' ಸಂಸ್ಥೆಗಳಲ್ಲಿ ನೀವು ಮಾಡಿದ ಕೆಲಸಗಳು ಬಹಳ ಮುಖ್ಯವಾದವು.**

ಸುಚಿತ್ರಾಕ್ಕೆ ಆರಂಭದಿಂದಲೂ ನಾನು ಅಧ್ಯಕ್ಷೆಯಾಗಿ, ಟ್ರಸ್ಟಿಯಾಗಿ, ಸದಸ್ಯೆಯಾಗಿ ಕೆಲಸ ಮಾಡಿದ್ದೀನಿ. 'ಸ್ನೇಹವಲಯ' ಅಂತ ನಾನೇ ಒಂದು ಸಂಸ್ಥೆಯನ್ನು ಕಟ್ಟಿದ್ದೆ. ಆ ಹೆಸರನ್ನ ಸೂಚಿಸಿ, ಆ ಸಂಸ್ಥೆಯಲ್ಲಿ ನನ್ನ ಜೊತೆ ಕೆಲಸ ಮಾಡಿದವರು ಹರಿಹರಪ್ರಿಯ. 'ಸ್ನೇಹವಲಯ'ದ ಕೆಲಸಗಳನ್ನು ಮೆಚ್ಚಿ ಅಡಿಗರು ಮತ್ತು ನಿಸಾರ್ ಅಹಮದ್ ಅವರು ನಮ್ಮನ್ನು ಪ್ರೋತ್ಸಾಹಿಸಿದ್ದರು. 'ಸ್ನೇಹವಲಯ' ಹಾಗೂ ಕ್ರೈಸ್ಟ್ ಕಾಲೇಜಿನ ಸಹಭಾಗಿತ್ವದಲ್ಲಿ, ಬೇಂದ್ರೆ ಉಪನ್ಯಾಸ ಮಾಲಿಕೆ ಹಾಗೂ ಕುವೆಂಪು ಉಪನ್ಯಾಸ ಮಾಲಿಕೆಗಳನ್ನು ಆಯೋಜಿಸಿದ್ದೆವು. ಕರ್ನಾಟಕದಾದ್ಯಂತ ವಿದ್ವಾಂಸರನ್ನ ಕರೆಸಿ, ಅವರಿಂದ ಉಪನ್ಯಾಸ ಮಾಡಿಸಿ, ಅವುಗಳನ್ನು ಪ್ರಕಟ ಕೂಡ ಮಾಡಿದರು. ಸುಚಿತ್ರಾಗೆ ಮಾಡಿದ 'ಆಸ್ವಾದ', 'ಸುಗ್ಗಿ'ಯಂತಹ ಕಲಾಸ್ವಾದನೆಯ ಶಿಬಿರಗಳೂ ತುಂಬಾ ಜನಪ್ರಿಯವೂ ಆದವು ಮತ್ತು ಇವತ್ತಿಗೂ ಜನ ಅದರ ಬಗ್ಗೆ ಮೆಚ್ಚುಗೆಯಿಂದ ಮಾತನಾಡ್ತಾರೆ. ಚಿತ್ರಕಲೆ, ಸಂಗೀತ, ಸಾಹಿತ್ಯ ಹೀಗೆ ಎಲ್ಲ ಕ್ಷೇತ್ರಗಳಿಂದ ಪರಿಣಿತರು ಆ ಕಾರ್ಯಕ್ರಮಗಳಿಗೆ ಬಂದಿದ್ದರು. ಈಚೆಗೆ ನನಗೆ ಬಂದ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನದ ಹಣವನ್ನೂ ನಾನು 'ಸುಚಿತ್ರಾ ಚಿತ್ರ ಸಮಾಜ'ಕ್ಕೆ ಕೊಟ್ಟಿದ್ದೀನಿ. ಆ ಹಣದಲ್ಲಿ ಭಾರತೀಯ ಸಿನಿಮಾರಂಗಕ್ಕೆ ಕೊಡುಗೆ ನೀಡಿದ ಮಹಿಳೆಯರನ್ನು ಕುರಿತ ಪುಸ್ತಕವನ್ನು ಅವರು ಪ್ರಕಟಿಸುವ ಯೋಜನೆಯಿದೆ. ಇದೊಂದೇ ಅಲ್ಲ, ನಾನು ಯಾವ ಪ್ರಶಸ್ತಿಯ ಹಣವನ್ನೂ ಸ್ವಂತಕ್ಕೆ ಬಳಸಿಕೊಂಡಿಲ್ಲ. ಒಂದಲ್ಲಾ ಒಂದು ಸಾಮಾಜಿಕ, ಕ್ರಿಯಾಶೀಲ ಕೆಲಸಗಳಿಗೇ ಅದನ್ನು ಬಳಸಿದ್ದೀನಿ. ಗಾರ್ಮೆಂಟ್ ಹಾಗೂ ಪೌರಕಾರ್ಮಿಕರ ಸಂಘಗಳಿಗೆ ಪ್ರಶಸ್ತಿಗಳ ಹಣವನ್ನ ನಾನು ಬಳಸಿದ್ದೀನಿ.

ಉದಯಭಾನು ಸಂಸ್ಥೆಯಿಂದ 'ಬೆಂಗಳೂರು ದರ್ಶನ'ದಂತಹ ಬೃಹತ್ ಯೋಜನೆಗಳನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ್ದು ನನಗೆ ಸಮಾಧಾನದ ವಿಷಯ. 'ಬೆಂಗಳೂರು ದರ್ಶನ'ವನ್ನಂತೂ ಬದಲಾದ ಬೆಂಗಳೂರಿನ ಬೆಳವಣಿಗೆಗಳಿಗೆ ಅನುಗುಣವಾಗಿ ಮತ್ತೆ ಹೊಸದಾಗಿ ಲೇಖನಗಳನ್ನು ಬರೆಸಿ ಮರುಮುದ್ರಣ ಮಾಡಿದ್ದೀವಿ. 'ಕಲಾ ದರ್ಶನ' ಕೃತಿಯನ್ನು 'ನವಕರ್ನಾಟಕ'ಕ್ಕಾಗಿ ಮಾಡಿದ್ದು. ಎಂ.ಎಚ್. ಕೃಷ್ಣಯ್ಯ ಹಾಗೂ ಎಲ್.ಎಸ್. ಶೇಷಗಿರಿ ರಾವ್ ಅವರೊಂದಿಗೆ ಸೇರಿ

